ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1565
ಮಾನ್ಯ ಸದಸ್ಯರ ಹೆಸರು	ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶಿತ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	24.09.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ತಿಗಳ ಜನಾಂಗದ ಸರ್ವತೋಮುಖ ಅಭಿವೃದ್ಧಿ ಅಂಗವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆವತಿಯಿಂದ 2008-09 ರಿಂದ ಇಲ್ಲಿಯವರೆಗೂ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ತಿಗಳ ಜನಾಂಗದ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯಾವುದೇ ಕಾರ್ಯಕ್ರಮ ಅನುಷ್ಠಾನಗೊಳಿಸಿರುವುದಿಲ್ಲ, ರಾಜ್ಯದಲ್ಲಿ ತಿಗಳ ಜನಾಂಗವು ಸೇರಿದಂತೆ ಹಿಂದುಳಿದ ವರ್ಗಗಳ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅನುಬಂಧ-1 ರಲ್ಲಿನ ಯೋಜನೆ/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
ಆ)	ತಿಗಳ ಜನಾಂಗದ ಸಲುವಾಗಿ ಸರ್ಕಾರದಿಂದ ಸಮುದಾಯ ಭನಗಳನ್ನು ನಿರ್ಮಿಸಲಾಗಿದೆಯೇ; ಅಥವಾ ನಿರ್ಮಿಸಲು ಸರ್ಕಾರದ ಬಳಿ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿವಿಧ ಜಾತಿ ಜನಾಂಗಗಳ ಸಮುದಾಯ ಚಟುವಟಿಕೆಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ನಡೆಸಲು ವಿವಿಧ ಹಿಂದುಳಿದ ವರ್ಗಗಳ ಜಾತಿಗಳಿಗೆ ಸೇರಿದ ಸಂಘ-ಸಂಸ್ಥೆಗಳಿಗೆ ಸಮುದಾಯ/ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರು ಮಾಡಲಾಗುತ್ತಿದೆ. ಇದರಡಿಯಲ್ಲಿ ತಿಗಳ ಜನಾಂಗಕ್ಕೆ ಸೇರಿದ ಸಂಘ-ಸಂಸ್ಥೆಗಳಿಗೂ ಸಮುದಾಯ ಭವನ /ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ 2008-09 ರಿಂದ ಸಹಾಯಧನ ಮಂಜೂರು ಮಾಡಲಾದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಇ)	2008-09 ರಿಂದ ಇಲ್ಲಿಯವರೆಗೆ ದೇವರಾಜು ಅರಸು ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದ ತಿಗಳ ಜನಾಂಗದವರಿಗೆ ನೀಡಿದ ಸೌಲಭ್ಯ/ಸವಲತ್ತುಗಳೇನು? (ವಿವರಗಳನ್ನು ನೀಡುವುದು).	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2008-09 ರಿಂದ 2015-16 ನೇ ಸಾಲಿನ ವರೆಗೆ ತಿಗಳ ಸಮುದಾಯಕ್ಕೆ ಪ್ರತ್ಯೇಕ ಅನುದಾನ ನೀಡಿರುವುದಿಲ್ಲ, 2016-17 ಸಾಲಿನಿಂದ 2019-20 ಸಾಲಿನವರೆಗೆ ನಿಗಮದಿಂದ ತಿಗಳ ಸಮುದಾಯದ ಒಟ್ಟು 8490 ಫಲಾನುಭವಿಗಳಿಗೆ ರೂ.4082.62ಲಕ್ಷಗಳ ಸಾಲ/ಸಹಾಯಧನ ಸೌಲಭ್ಯ ಒದಗಿಸಲಾಗಿರುತ್ತದೆ.

ಖ್ಯ:ಹಿಂವಕ 584 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ-1

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತ ಹೊಂದಿದವರು)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1565ಕ್ಕೆ

ಕಾರ್ಯಕ್ರಮಗಳ ವಿವರ

ಶೈಕ್ಷಣಿಕ ಕಾರ್ಯಕ್ರಮಗಳು	
I	ವಿದ್ಯಾರ್ಥಿನಿಲಯಗಳ ನಿರ್ವಹಣೆ
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
2	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
3	ಸರ್ಕಾರಿ ಆಶ್ರಮಶಾಲೆಗಳು
4	ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು
5	ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
6	ಖಾಸಗಿ ಅನುದಾನಿತ ಅನಾಥಾಲಯಗಳು
7	ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ
II	ವಿದ್ಯಾರ್ಥಿವೇತನ ಕಾರ್ಯಕ್ರಮಗಳು
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
2	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
3	ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ
4	ಶುಲ್ಕ ಮರು ಪಾವತಿ
5	ಪೂರ್ಣಾವಧಿ ಪಿ.ಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಫೆಲೋಷಿಪ್
6	ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ
7	ದೇವರಾಜ ಅರಸು ಪ್ರತಿಭಾ ಪುರಸ್ಕಾರ
8	ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ
9	ಐ.ಐ.ಟಿ, ಐ.ಐ.ಎಂ, ಐ.ಐ.ಎಸ್ಸಿ ಇತ್ಯಾದಿಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಒಂದು ಬಾರಿ ರೂ.2.00 ಲಕ್ಷ ಪ್ರೋತ್ಸಾಹಧನ
III	ತರಬೇತಿ ಕಾರ್ಯಕ್ರಮಗಳು
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ನರ್ಸಿಂಗ್ ತರಬೇತಿ
3	ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ
4	ಕಾನೂನು ಪದವೀಧರರಿಗೆ ಶಿಷ್ಯವೇತನ
5	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ

6	ಸೇನೆಗಳಿಗೆ ಆಯ್ಕೆಯಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ
7	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ
IV	**ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
2	ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ
3	ಆಶ್ರಮ ಶಾಲೆಗಳ ನಿರ್ವಹಣೆ
4	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
5	ಅರಿವು ಮೂಡಿಸುವ ಕಾರ್ಯಕ್ರಮ
6	ಮೂಲಭೂತ ಸೌಕರ್ಯಗಳು
7	ವಸತಿ ಸೌಲಭ್ಯ
8	ನಿವೇಶನ ಹಂಚಿಕೆಗಾಗಿ ಜಮೀನು ಖರೀದಿ
9	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನ ಮಾಡಲಾಗುತ್ತಿರುವ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು
V	ವಿವಿಧ ಸಮುದಾಯಗಳ ಅಭಿವೃದ್ಧಿ
1	ಹಿಂದುಳಿದ ವರ್ಗಗಳ ಸಮುದಾಯಗಳು ನಿರ್ಮಿಸುವ ಸಮುದಾಯ ಭವನಗಳಿಗೆ ಸಹಾಯಾನುಧಾನ
2	ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ನಡೆಸುವ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಒಂದು ಬಾರಿಯ ಅನುದಾನ
3	ದೇವರಾಜ ಅರಸು ಭವನ ನಿರ್ಮಾಣ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್ ರಮೇಶ್ (ನಾಮನಿರ್ದೇಶಿತ ಹೊಂದಿದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 1565 ಕ್ಕೆ ಅನುಬಂಧ-2

ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ 2008-09 ಇಲ್ಲಿಯವರೆಗೆ ತಿಗಳ ಜನಾಂಗಕ್ಕೆ ಮಂಜೂರಾದ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ವಿವರ:

				ರೂ.(ಲಕ್ಷಗಳಲ್ಲಿ)				
ಕ್ರ.ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ವರ್ಷ	ಮಂಜೂರಾದ ಮೊತ್ತ	ಆಯುಕ್ತಾಲಯದಿಂದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಜಿಲ್ಲಾಧಿಕಾರಿಗಳಿಂದ ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
1	2	3	4	5	6	7	8	9
ಬೆಂಗಳೂರು ನಗರ								
1	ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ(ರಿ) 10ನೇ ಮೈನ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10	ವಿದ್ಯಾರ್ಥಿನಿಲಯ	2009-10	5.00	5.00	5.00	ಮುಕ್ತಾಯಗೊಂಡಿದೆ	
2	ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ(ರಿ) 10ನೇ ಮೈನ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10	ವಿದ್ಯಾರ್ಥಿನಿಲಯ	2011-12	2.00	2.00	2.00	ಮುಕ್ತಾಯಗೊಂಡಿದೆ	
3	ಶ್ರೀ ಕೃಷ್ಣ ಧರ್ಮರಾಯ ಸ್ವಾಮಿ ಸೇವಾ ಸಮಿತಿ, ಹೆಬ್ಬಗೋಡಿ, ಆನೇಕಲ್ ತಾ.	ಸಮುದಾಯ ಭವನ	2012-13	10.00	10.00	10.00	ಮುಕ್ತಾಯಗೊಂಡಿದೆ	
4	ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ(ರಿ) 10ನೇ ಮೈನ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10	ವಿದ್ಯಾರ್ಥಿನಿಲಯ	2012-13	2.00	2.00	2.00	ಮುಕ್ತಾಯಗೊಂಡಿದೆ	
5	ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಸಂಘ, ಆನೇಕಲ್ ಟೌನ್	ಸಮುದಾಯ ಭವನ	2014-15	10.00	10.00	10.00	ಮುಕ್ತಾಯಗೊಂಡಿದೆ	
6	ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ(ರಿ) 10ನೇ ಮೈನ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10	ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯ	2016-17	50.00	12.50	12.50	ಪ್ರಾರಂಭಿಸಲಾಗಿದೆ	
7	ಕರ್ನಾಟಕ ರಾಜ್ಯ ತಿಗಳರ (ವನ್ನಿಕುಲ ಕ್ಷತ್ರಿಯರ) ಸಂಘ, ಸಿದ್ದಾಪುರ	ಸಮುದಾಯ ಭವನ	2017-18	20.00	20.00	20.00	ಮುಕ್ತಾಯಗೊಂಡಿದೆ	
8	ಶ್ರೀ ಕೃಷ್ಣ ಧರ್ಮರಾಯ ಸೇವಾ ಸಮಿತಿ, ಹೆಬ್ಬಗೋಡಿ	ಸಮುದಾಯ ಭವನ	2017-18	25.00	6.25	6.25	ಪ್ರಗತಿಯಲ್ಲಿದೆ	
	ಒಟ್ಟು ಮೊತ್ತ			124.00	67.75	67.75		
ಬೆಂಗಳೂರು ಗ್ರಾಮಾಂತರ								
1	ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ತಿಗಳರ ಸಮುದಾಯ ಭವನ ನಿರ್ಮಾಣ	ಸಮುದಾಯ ಭವನ	2017-18	30.00	30.00	30.00	ಪೂರ್ಣಗೊಂಡಿದೆ	
2	ಶ್ರೀ.ಮಹಾಲಕ್ಷ್ಮೀ ತಿಗಳರ ಮಹಾ ಸಂಸ್ಥಾನ, ಶಿವಗಂಗೆ ನೆಲಮಂಗಲ ತಾಲ್ಲೂಕು.	ವಿದ್ಯಾರ್ಥಿ ನಿಲಯ	2012-13	150.00	112.50	100.00	ಕಾಮಗಾರಿ ಸ್ಥಗಿತಗೊಂಡಿರುತ್ತದೆ.	
	ಒಟ್ಟು ಮೊತ್ತ			180.00	142.50	130.00		
ಕೋಲಾರ								

ಕ್ರ.ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ವರ್ಷ	ಮಂಜೂರಾದ ಮೊತ್ತ	ಆಯುಕ್ತಾಲಯದಿಂದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಜಿಲ್ಲಾಧಿಕಾರಿಗಳಿಂದ ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
1	ತಿಗಳ ಕ್ಷೇಮಾಭಿವೃದ್ಧಿ ಸಂಘ, ಕೋಲಾರ ಟೌನ್	ಸಮುದಾಯ ಭವನ	2009-10	5.00	5.00	0.00	ಕಾಮಗಾರಿ ಪೂರ್ಣಗೊಂಡಿರುತ್ತದೆ	
2	ತಿಗಳ ಜಾಗೃತಿ ಕ್ಷೇಮಾಭಿವೃದ್ಧಿ ಸಂಘ, ಬೇತಮಂಗಲ, ಬಂಗಾರಪೇಟೆ ತಾಲ್ಲೂಕು	ಸಮುದಾಯ ಭವನ	2014-15	10.00	10.00		ಕಾಮಗಾರಿ ಪೂರ್ಣಗೊಂಡಿರುತ್ತದೆ	
3	ಶ್ರೀ ಧರ್ಮರಾಯಸ್ವಾಮಿ ಯುವಕರ ಕ್ಷೇಮಾಭಿವೃದ್ಧಿ ಸಂಘ, ತಿಗಳ ಸಮಾಜ ಮುದವತ್ತಿ ಗ್ರಾಮ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ.	ಸಮುದಾಯ ಭವನ	2017-18	10.00	2.50	0.00	ಕಾಮಗಾರಿ ಪ್ರಗತಿಯಲ್ಲಿದೆ.	
4	ಶ್ರೀ ಆದಿಶಕ್ತಿ ಎಜುಕೇಷನಲ್ ಟ್ರಸ್ಟ್(ರಿ), 1ನೇ ಅಡ್ಡ ರಸ್ತೆ, ಧರ್ಮರಾಯಸ್ವಾಮಿ ದೇವಾಲಯ ಬಳ, ಕಾರಂಜಿಕಟ್ಟೆ, ಕೋಲಾರ ಟೌನ್, ಕೋಲಾರ ಜಿಲ್ಲೆ.	ವಿದ್ಯಾರ್ಥಿ ನಿಲಯ	2017-18	10.00	7.50	0.00	ಕಾಮಗಾರಿ ಮುಕ್ತಾಯಗೊಂಡಿದೆ.	
5	ಶ್ರೀ ಧರ್ಮರಾಯಸ್ವಾಮಿ ಹಾಗೂ ದ್ರೌಪತಿ ದೇವಿಯವರ ದೇವಾಲಯ ಅಭಿವೃದ್ಧಿ ಸಮಿತಿ, ಕಠಾರಿಪಾಳ್ಯ, ಕೋಲಾರ ನಗರ, ಕೋಲಾರ ಜಿಲ್ಲೆ.	ಸಮುದಾಯ ಭವನ	2017-18	10.00	7.50	0.00	ಕಾಮಗಾರಿ ಮುಕ್ತಾಯದ ಹಂತದಲ್ಲಿದೆ	
6	ಕೋಲಾರ ಜಿಲ್ಲಾ ತಿಗಳ ಜನಾಂಗದ ಸಮನ್ವಯ ಸಮಿತಿ, ಕಾರಂಜಿಕಟ್ಟೆ, ಕೋಲಾರ ನಗರ, ಕೋಲಾರ ಜಿಲ್ಲೆ.	ಸಮುದಾಯ ಭವನ	2017-18	10.00	7.50	0.00	ಸುಣ್ಣ-ಬಣ್ಣ ಕೆಲಸ ಪ್ರಗತಿಯಲ್ಲಿದೆ	
7	ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಅಭಿವೃದ್ಧಿ ಟ್ರಸ್ಟ್(ರಿ), ಹೋಳೂರು ಗ್ರಾಮ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ.	ಸಮುದಾಯ ಭವನ	2017-18	10.00	2.50	0.00	ಕಾಮಗಾರಿ ಪ್ರಗತಿಯಲ್ಲಿದೆ.	
8	ಕೋಲಾರ ಜಿಲ್ಲೆಯ ಬಂಗಾರಪೇಟೆಯ ಕಾರಹಳ್ಳಿಯಲ್ಲಿ ವಹ್ನಿಕುಲ ಕ್ಷತ್ರಿಯ ಸಮುದಾಯ ಭವನ	ಸಮುದಾಯ ಭವನ	2017-18	15.00	3.75	0.00	ಪ್ರಾರಂಭಿಕ ಹಂತ	
9	ಮುತ್ಯಾಲಮ್ಮದೇವಿ ವಹ್ನಿಕುಲ ಕ್ಷತ್ರಿಯ ತಿಗಳರ ಸಂಘ(ರಿ), ಲಕ್ಕೂರು, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.	ಸಮುದಾಯ ಭವನ	2017-18	10.00	7.50	0.00	ಮೊದಲನೇ ಮಹಡಿ ಪ್ರಗತಿಯಲ್ಲಿರುತ್ತದೆ	
	ಒಟ್ಟು ಮೊತ್ತ			90.00	53.75	0.00		
ತುಮಕೂರು								
1	ಶ್ರೀ ಅಗ್ನಿಬನ್ನಿರಾಯ ಸ್ವಾಮಿ ತಿಗಳ ಯುವಕ ಸಂಘ (ರಿ) ಮುನಿಯೂರು, ತುರುವೇಕೆರೆ.	ಸಮುದಾಯಭವನ	2011-12	5.00	5.00	5.00	ಪೂರ್ಣಗೊಂಡಿದೆ	
2	ಶ್ರೀ ಅಗ್ನಿಕುಲ ತಿಗಳರ ಜನಾಂಗ (ರಿ) ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನ ಸಮಿತಿ ಹನುಮಂತಪುರ ಬಡಾವಣೆ, ತುಮಕೂರು.	ಸಮುದಾಯಭವನ	2011-12	100.00	100.00	100.00	ಪೂರ್ಣಗೊಂಡಿದೆ	
3	ಶ್ರೀ ಅಗ್ನಿವಂಶ ಕ್ಷತ್ರಿಯ ತಿಗಳ ವಿದ್ಯಾಭಿವೃದ್ಧಿ ಸಂಘ(ರಿ) ತುಮಕೂರು (ದೇವರಾಯಪಟ್ಟಣ ದಲ್ಲಿ ಕಟ್ಟಡ)	ವಿದ್ಯಾರ್ಥಿನಿಲಯ	2011-12	5.00	5.00	5.00	ಪೂರ್ಣಗೊಂಡಿದೆ	
4	ಶ್ರೀ ಅಗ್ನಿವಂಶ ಕ್ಷತ್ರಿಯ ವಿದ್ಯಾಭಿವೃದ್ಧಿ ಸಂಘ(ರಿ) ಗುಬ್ಬಿ ಟೌನ್	ಸಮುದಾಯಭವನ	2011-12	55.00	55.00	55.00	ಪೂರ್ಣಗೊಂಡಿದೆ	

ಕ್ರ.ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ವರ್ಷ	ಮಂಜೂರಾದ ಮೊತ್ತ	ಆಯುಕ್ತಾಲಯದಿಂದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಜಿಲ್ಲಾಧಿಕಾರಿಗಳಿಂದ ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
5	ತಿಗಳರ (ಅಗ್ನಿವಂಶ ಕ್ಷತ್ರಿಯ) ವಿದ್ಯಾಭಿವೃದ್ಧಿ ಸಂಘ (ರಿ), ಬಿ.ಹೆಚ್.ರಸ್ತೆ, ತುಮಕೂರು, ತುಮಕೂರು ಜಿಲ್ಲೆ	ವಿದ್ಯಾರ್ಥಿನಿಲಯ	2017-18	25.00	18.75	18.75	ಮೇಲ್ಛಾವಣಿ ಹಂತ	
6	ಶ್ರೀ ಮಹಾಲಕ್ಷ್ಮೀ ತಿಗಳ ಮಹಾಸಂಸ್ಥಾನ ಟ್ರಸ್ಟ್ (ರಿ), ಇವರ ವತಿಯಿಂದ ಶಾರದಾದೇವಿ ನಗರ, ಬೆಳಗುಂಬ ರಸ್ತೆಯಲ್ಲಿರುವ ಶ್ರೀ ಸರಪಳ್ಳಿ ಸ್ವಾಮಿ ಮಠದ ಆವರಣದಲ್ಲಿ ಸಮುದಾಯಭವನ	ಸಮುದಾಯಭವನ	2017-18	50.00	12.50	12.50	ಮೇಲ್ಛಾವಣಿ ಹಂತ	
7	ಅಗ್ನಿವಂಶ ಕ್ಷತ್ರಿಯ ತಿಗಳರ ಕ್ಷೇಮಾಭಿವೃದ್ಧಿ ಸಂಘ, ಹನುಮಂತಗಿರಿ ಗ್ರಾಮ, ಕೋರಾ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ: ಸಮುದಾಯಭವನ	ಸಮುದಾಯಭವನ	2017-18	50.00	37.50	37.50	ಮೇಲ್ಛಾವಣಿ ಹಂತ	
	ಒಟ್ಟು ಮೊತ್ತ			290.00	233.75	233.75		
ರಾಮನಗರ								
1	ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಸಂಘ (ರಿ), ತಟ್ಟೇಕೆರೆ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ.	ಸಮುದಾಯ ಭವನ	2012-13	25.00	25.00	25.00	ಪ್ಲಾಸ್ಟಿಂಗ್, ಟೈಲ್ಸ್ ಅಳವಡಿಕೆ ಮತ್ತು ಸುಣ್ಣ ಬಣ್ಣ ಕಾಮಗಾರಿ ಬಾಕಿ ಇರುತ್ತದೆ	
2	ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಸಂಘ (ರಿ), ಬಾಲಗೇರಿ, ರಾಮನಗರ ಜಿಲ್ಲೆ	ಸಮುದಾಯ ಭವನ	2013-14	10.00	10.00	10.00	ತಳಪಾಯದ ಕಾಮಗಾರಿ ಪ್ರಗತಿಯಲ್ಲಿರುತ್ತದೆ	
3	ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ತಿಗಳರ ಚಾರಿಟೇಬಲ್ ಟ್ರಸ್ಟ್ (ರಿ), ಹೊಸಪೇಟೆ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ	ಸಮುದಾಯ ಭವನ	2013-14	25.00	25.00	25.00	ಮೊದಲನೇ ಮಹಡಿಯ ಪ್ಲಾಸ್ಟಿಂಗ್ ಕಾಮಗಾರಿ ಮುಕ್ತಾಯಗೊಂಡಿದ್ದು, ಟೈಲ್ಸ್ ಅಳವಡಿಕೆ ಮತ್ತು ಸುಣ್ಣ ಬಣ್ಣ ಕಾಮಗಾರಿ ಬಾಕಿ ಇರುತ್ತದೆ	
4	ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ತಿಗಳರ ಚಾರಿಟೇಬಲ್ ಟ್ರಸ್ಟ್ (ರಿ), ಹೊಸಪೇಟೆ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಮಾಗಡಿ ಪಟ್ಟಣದ 2ನೇ ವಾರ್ಡಿನ ತಿರುಮಲೆ ವಿಜಯಬ್ಯಾಂಕ್ ಮುಂಭಾಗ)	ಸಮುದಾಯ ಭವನ	2017-18	5.00	3.75	3.75	ಮೊದಲನೇ ಮಹಡಿಯ ಪ್ಲಾಸ್ಟಿಂಗ್ ಕಾಮಗಾರಿ ಮುಕ್ತಾಯಗೊಂಡಿದ್ದು, ಟೈಲ್ಸ್ ಅಳವಡಿಕೆ ಮತ್ತು ಸುಣ್ಣ ಬಣ್ಣ ಕಾಮಗಾರಿ ಬಾಕಿ ಇರುತ್ತದೆ	
5	ಶ್ರೀರಂಗನಾಥಸ್ವಾಮಿ ತಿಗಳ ಜನಾಂಗಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್(ರಿ), ಹೋಸಪೇಟೆ, ಭಜನೆ ಮನೆ ರಸ್ತೆ, ಮಾಗಡಿ ಇವರ ಸಮುದಾಯವಭವನ ಮುಂದುವರಿದ ಕಾಮಗಾರಿ	ಸಮುದಾಯ ಭವನ	2017-18	10.00	10.00	10.00	ಸುಣ-ಬಣ್ಣ ಕಾಮಗಾರಿ ಬಾಕಿ ಇರುತ್ತದೆ.	
	ಒಟ್ಟು ಮೊತ್ತ			75.00	73.75	73.75		
ಮೈಸೂರು								

ಕ್ರ.ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ವರ್ಷ	ಮಂಜೂರಾದ ಮೊತ್ತ	ಆಯುಕ್ತಾಲಯದಿಂದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಜಿಲ್ಲಾಧಿಕಾರಿಗಳಿಂದ ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
1	ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ ಮೈಸೂರು	ಸಮುದಾಯ ಭವನ	2009-10	5.00	5.00	5.00	ಕಾಮಗಾರಿ ಪೂರ್ಣಗೊಂಡಿದೆ.	
2	ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘದ ತಿಗಳರ ಸಮುದಾಯ ಭವನ ಮೈಸೂರು ನಗರ	ವಿದ್ಯಾರ್ಥಿ ನಿಲಯ	2017-18	50.00	37.50	37.50	ಪ್ರಗತಿಯಲ್ಲಿದೆ.	
	ಒಟ್ಟು ಮೊತ್ತ			55.00	42.50	42.50		